ಸ್ವಲ್ಪ ಜಾಸ್ತಿ ಮರ ಸಿಗಬಹುದು. ಅದು ಸಿಕ್ಕಿದಾಗ ಅದನ್ನು ಅವರು ಕಳ್ಳಸಾಗಾಣಿಕೆ ಮಾಡುತ್ತಾರೆ. ಉದಾಹರಣೆಗೆ ಒಂದು ಕಡೆ ೧೦೦ ಸಿ.ಎಫ್.ಟಿ. ಮರ ಎಂದು ಮಾರ್ಕ್ ಮಾಡಿದ್ದರೆ ಅಲ್ಲಿ ೧೨೦ ಸಿ.ಎಫ್.ಟಿ. ಮರ ಸಿಕ್ಕುತ್ತದೆ. ಅದರಲ್ಲಿ ಅಲ್ಲಿ ೨೦. ಸಿ.ಎಫ್.ಟಿ. ಮರ ಕಳ್ಳಸಾಗಣೆ ಆಗುತ್ತದೆ. ಈ ಬಗ್ಗೆ ಸರ್ಕಾರ ಗಮನಹರಿಸಬೇಕು. ಇನ್ನು ಗಂಧದ ಮರದ ಬಗ್ಗೆ ಹೇಳಬೇಕೆಂದರೆ, ಇವತ್ತು ಯಾರ ಬಳಿ ಮರ ಇರುತ್ತದೆ ಅದನ್ನು ಕಡಿದ ಮೇಲೆ ಕೋರ್ಟಿಗೆ ಕಳುಹಿಸಬೇಕೆಂದು ಇದೆ. ಈ ಪ್ರಕಾರ ನಮ್ಮ ಕಡೆ ಒಬ್ಬರು ದೊಡ್ಡ ಪ್ಲಾಂಟರ್ ಆದ ಪಿ. ಸಿ. ಗಣಪತಿ ಎಂಬುವವರು ಈ ಮರ ವನ್ನು ಕಡಿದು ಕೋರ್ಟಿಗೆ ಕಳುಹಿಸಿದ್ದು ಅವರಿಗೆ ಗಂಧದ ಬೆಲೆ ಹಾಗೂ ಲಾರೀ ಬಾಡಿಗೆ ಸಹಾ ಬಂದಿರುವುದಿಲ್ಲ. ಆದರೆ ಈ ಮರವನ್ನು ಕಳ್ಳಸಾಗಣೆ ಮಾಡಿದ್ದರೆ ಅವರಿಗೆ ಹೇರಳ ಹಣ ಬರುತ್ತಿತ್ತು. ಆದ್ದರಿಂದ ಈಗ ಅವರಿಗೆ ಬೇಗನೆ ಹಣ ಸಂದಾಯ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕೊಡಗಿನ ೨ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಪಿ.ಜಿ ಸಾವಿರ ಎಕರೆಯಲ್ಲಿ ಏಲಕ್ಕಿ ಬೆಳೆ ಇದೆ. ಈ ಬೆಳೆ ಬೆಳೆಯಲು ೧೯೫೬ರಲ್ಲಿ ಕೊಡಗು ಸರ್ಕಾರ ಅವರಿಗೆ ಪರವಾನಗಿ ಕೊಟ್ಟಿತ್ತು. ಆ ಒಂದು ಲೀಸ್ ೭೪ಕ್ಕೆ ಮುಗಿದಿದೆ. ಹಾಗೂ ಯಾರು ಲೀಸ್ ಹಣವನ್ನು ಕಟ್ಟಿ ಕಂದಾಯವನ್ನು ಕಟ್ಟಿಕೊಂಡು ಬರುತ್ತಿದ್ದಾರೆ ಅವರಿಗೆ ಇದನ್ನು ರಿನ್ಯೂ ಮಾಡಬೆಕೆಂದು ಇದೆ. ಆದರೂ ರಿನ್ಯೂ ಮಾಡದಿದ್ದರಿಂದ ಈ ಬಗ್ಗೆ ೫೦೦ ರಿಟ್ ಪಿಟಿಷನ್ಸ್ ಬಂದಿರುತ್ತವೆ.

ಶ್ರೀ ಬಿ. ಎ. ಜೀವಿಜಯ.—ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಎಂ. ಎಂ. ನಾಣಯ್ಯ.—ಏನು, ಪರಿಶೀಲನೆ ಮಾಡುತ್ತೇನೆ ಎಂದಿದ್ದೀರಿ. ಇದನ್ನು ತಾವು ಬೇಗ ಮಾಡಬೇಕಾಗಿದೆ. ಇನ್ನು ತರಜಿ ಹತ್ತಿರ ೧೪ ಜನ ಹರಿಜನ ಕುಟುಂಬದವರು ಸುಮಾರು ೬೯ ಎಕರೆಗಳನ್ನು ತಲಾ ಎರಡೆರಡು ಎಕರೆಯೆಂದು ಸಾಗುವಳಿ ಮಾಡಿಕೊಂಡು ಕುಂಬರಿ ಬೆಳೆ ಮಾಡುತ್ತಿದ್ದಾರೆ. ಇದಕ್ಕೆ ಈಗ ಒಬ್ಬ ದಣಿಗಳು ಬಂದಿದ್ದಾರೆ. ಇದು ಸರ್ಕಾರಿ ಜಾಗ ಇದನ್ನು ಖಾಲಿ ಮಾಡಿ ಎಂದು ಅವರು ಹೇಳುತ್ತಿದ್ದಾರೆ. ಹಾಗೂ ಅರಣ್ಯ ಇಲಾಖೆಯಲ್ಲಿ ಈ ಜಾಗಕ್ಕೆ ಸಂಬಂಧಪಟ್ಟ ಫೈಲ್‌ನ್ನು ಸಂಬಂಧಪಟ್ಟ ಕ್ಲಾರ್ಕ್ ಸುಟ್ಟು ಹಾಕುವುದಕ್ಕಾಗಿ ಒಂದು ಕಾನ್‌ಫಿರೆನ್ಸ್ ನಡೆಯಿತು. ಈ ೬೯ ಎಕರೆಗಳನ್ನು ಸರ್ಕಾರ ಒಬ್ಬ ಖಾಸಗೀ ವ್ಯಕ್ತಿಗೆ ಕೊಟ್ಟಿದೆ. ಆದ್ದರಿಂದ ಈ ೧೪ ಕುಟುಂಬದವರಿಗೆ ಸರ್ಕಾರ ರಕ್ಷಣೆ ಕೊಡಬೇಕೆಂದು ಹೇಳುತ್ತೇನೆ. ಇನ್ನು ಭಾರತದಲ್ಲಿ ೩ ಕಡೆ ಮಾತ್ರ ಟೀ ರಿಸರ್ಚ್ ಮಾಡುತ್ತಿದ್ದು ನಮ್ಮಲ್ಲೂ ದಾಳಿಬೆಡ್‌ನಲ್ಲಿ ಇದು ನಡೆಯುತ್ತಿದೆ. ಅಲ್ಲಿ ಸುಮಾರು ೬೦ ಕುಟುಂಬದವರು ಕೆಲಸ ಮಾಡುತ್ತಿದ್ದು ಅಲ್ಲಿ ಒಳ್ಳೆಯ ಟೀ ಬೆಳೆಯಲಾಗುತ್ತಿದೆ. ಆ ಜಾಗಕ್ಕೆ ಜೀಪ್ ಸಹಾ ಹೋಗಲು ಆಗುವುದಿಲ್ಲ. ಆ ರೀತಿ ಅಲ್ಲಿಯ ರಸ್ತೆ ಇದೆ. ಅದು ಏಕೆ ಹಾಗೆ ಇದೆ ಎಂದರೆ ಅಲ್ಲಿಗೆ ಯಾವ ಅಧಿಕಾರಿಯೂ, ಮಂತ್ರಿಯೂ ಹೋಗುವುದು ಬೇಡವೆಂದು ಆ ರೀತಿ ಇಟ್ಟಿದ್ದಾರೆಂದು ಕಾಣುತ್ತದೆ. ಅಲ್ಲಿ ೧೯೭೫–೭೬ನೇ ಇಸವಿಯಿಂದ ವರ್ಷಕ್ಕೆ ಸರಾಸರಿ ೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ರಿಸರ್ಚ್ ಮಾಡುತ್ತಿದ್ದಾರೆ. ಬಹಳ ಜನ ೧೫–೨೦ ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ. ಆದರೆ ಇವೊತ್ತು ಅಲ್ಲಿ ಆ ಜನರನ್ನು ಕೆಲಸದಿಂದ ವಾಪಸ್ ಕಳುಹಿಸುತ್ತಿದ್ದಾರೆ ಅವರು ಅಲ್ಲಿ ಅಷ್ಟು ವರ್ಷಗಳಿಂದ ಗುಡಿಸಲುಗಳನ್ನು ಹಾಕಿಕೊಂಡು ವಾಸ ಮಾಡುತ್ತಿದ್ದರು. ಅವರು ಟೀ ಬೆಳೆಯಲು ಬಹಳ ಕಷ್ಟಪಟ್ಟಿದ್ದಾರೆ. ಅಲ್ಲಿ ಕೆಲಸ ಚೆನ್ನಾಗಿ ಆಗುತ್ತಿದ್ದರೂ ಅದನ್ನು ಏಕೆ ಮುಚ್ಚಲು ಹೊರಟಿದ್ದಾರೋ ಗೊತ್ತಿಲ್ಲ. ಹಾಗೂ ಅಲ್ಲಿ ಇರುವ ಜನ ನಮಗೆ ಜಾಗವನ್ನು ಕೊಡಿ ನಮಗೆ ಲೀಸ್ ಮೂಲಕ ಕೊಡಿ ನಾವು ಕಂದಾಯ ಕಟ್ಟಿಕೊಂಡು ಒಳ್ಳೆಯ ಟೀ ಬೆಳೆಯುತ್ತೇವೆ ಎಂದು ಹೇಳುತ್ತಿದ್ದಾರೆ. ಈ ಜಾಗದಲ್ಲಿ ಒಳ್ಳೆಯ ಟೀ ಸಿಗುತ್ತದೆ. ಆದ್ದರಿಂದ ಆ ಜಾಗವನ್ನು ಆ ಕೆಲಸಗಾರರಿಗೆ ಕೊಟ್ಟು ಅಲ್ಲಿ ಒಳ್ಳೆಯ ಟೀ ಏಕೆ ಬೆಳೆಸಬಾರದು ಎಂದು ನಾನು ಕೇಳಿ ಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತು ಗಳನ್ನು ಮುಗಿಸುತ್ತೇನೆ.

ANNOUNCEMENT

MR. SPEAKER.—Now the discussion is concluded. Before the Minister commences his reply, there is an announcement to make:

At the meeting of the Leaders of the Parties convened in my Chambers to-day, it was agreed to despense with the Question